# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7403/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 19/01/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಹರೀಶ್ ಶೆಟ್ಟಿ, ತಂದೆ ಶೇಖರ್ ಶೆಟ್ಟಿ, ಮರ್ಣೆ ಗ್ರಾಮ, ಅಜೆಕಾರು ಅಂಚೆ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಹರೀಶ್ ಶೆಟ್ಟಿ ರವರು ಗೌರವಾನ್ವಿತ ಲೋಕಾಯುಕ್ತರವರ ಉಡುಪಿ ಕ್ಯಾಂಪ್ ಸಂದರ್ಭದಲ್ಲಿ ದೂರೊಂದನ್ನು ಸಲ್ಲಿಸಿ ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನ ಮರ್ಣೆ ಗ್ರಾಮದ ಸರ್ವೇ ನಂ.461/2 ರ 0.22 ಎಕರೆ ಜಮೀನಿಗೆ ಶ್ರೀ ಜಾರ್ಜ್ ಮಿನೇಜಸ್ ರವರು ಮಾಲೀಕರಾಗಿದ್ದು, ಅವರು ಪ್ರಕರಣದ ದೂರುದಾರರಿಗೆ ಪವರ್ ಆಫ್ ಅಟಾರ್ನಿ ನೀಡಿರುತ್ತಾರೆಂದು ಹಾಗೂ ಸದರಿ ಸ್ಥಳವನ್ನು ದೂರುದಾರರು ಖರೀದಿಸುವ ಕುರಿತು ಶ್ರೀ ಜಾರ್ಜ್ ಮಿನೇಜಸ್ ರವರೊಡನೆ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆಂದು ಹಾಗೂ ಸದರಿ ಜಮೀನಿನ ಖರೀದಿ ವಿಷಯಕ್ಕೆ ಸಂಬಂಧಿಸಿದಂತೆ ಬೇಕಾದ ನಕ್ಷೆಯನ್ನು ಪಡೆಯಲು ತಹಶೀಲ್ದಾರ್ ಕಛೇರಿಗೆ ಅನೇಕ ಬಾರಿ ಅರ್ಜಿ ಸಲ್ಲಿಸಿದ್ದರೂ ಸಹ ಬೇಕಾದ ನಕ್ಷೆಯನ್ನು ನೀಡಿರುವುದಿಲ್ಲ. ಎದುರುದಾರರುಗಳು ಸದರಿ ಜಮೀನಿನ ಭೂಮಾಪನೆಯನ್ನು ಸರಿಯಾಗಿ ನಿರ್ವಹಿಸುತ್ತಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಿ ತನ್ನ ತೊಂದರೆಯನ್ನು ನಿವಾರಿಸಬೇಕೆಂದು ಕೋರಿಕೊಂಡಿದ್ದ ಮೇರೆಗೆ, ಗೌರವಾನ್ವಿತ ಲೋಕಾಯುಕ್ತರ ಉಡುಪಿ ಕ್ಯಾಂಪ್ ಸಂದರ್ಭದಲ್ಲಿ ಹಾಜರಿದ್ದ ಕಾರ್ಕಳದ ತಹಶೀಲ್ದಾರ್‌ರವರು ಒಂದು ತಿಂಗಳ ಒಳಗೆ ಸದರಿ ಸರ್ವೇ ಕಾರ್ಯವನ್ನು ನಿರ್ವಹಿಸಿ ನಕ್ಷೆ ನೀಡುವ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡಿರುತ್ತಾರೆ. ಅದರಂತೆ, ಗೌರವಾನ್ವಿತರು ಸದರಿ ತಹಶೀಲ್ದಾರ್‌ರವರಿಂದ ಪಾಲನಾ ವರದಿ ಬರುವ ನಿಬಂಧನೆ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿರುತ್ತಾರೆ.

2. ಎದುರುದಾರರಿಂದ ಪಾಲನಾ ವರದಿಯನ್ನು ಪಡೆಯಲಾಗಿದ್ದು, ಎದುರುದಾರರು ತಮ್ಮ ಪಾಲನಾ ವರದಿಯಲ್ಲಿ (ಆಕ್ಷೇಪಣೆಯಲ್ಲಿ) ದೂರುದಾರರು ದಿ:20/05/2009 ರಲ್ಲಿ ಮೋಜಣಿ ತಂತ್ರಾಂಶದಲ್ಲಿ ಅರ್ಜಿ ಸಂಖ್ಯೆ: 16031108190590 ಅಂತೆ ಕ್ರಯದ ಉದ್ದೇಶದ ಬಗ್ಗೆ 11ಇ ನಕ್ಷೆಗಾಗಿ ಅರ್ಜಿ ಸಲ್ಲಿಸಿದ್ದು,

Sd/-

ಸದರಿ ಅರ್ಜಿಯನ್ನು ಸ್ಥಳ ಅಳತೆಗಾಗಿ ಪರವಾನಗಿ ಭೂಮಾಪಕರಿಗೆ ನೀಡಲಾಗಿತ್ತು. ಸದರಿ ಭೂಮಾಪಕರು ದೂರುದಾರರಿಗೆ ನೋಟೀಸ್ ನೀಡಿ ಸ್ಥಳಕ್ಕೆ ಹೋದಾಗ ದೂರುದಾರರು ಸ್ಥಳದಲ್ಲಿ ಹಾಜರಿಲ್ಲದ ಕಾರಣ ಸ್ಥಳ ಮಹಜರ್ ಮಾಡಿ ಕಡತವನ್ನು ವಿಲೇಗೊಳಿಸಲಾಗಿರುತ್ತದೆ. ನಂತರ ದೂರುದಾರರು ಗೌರವಾನ್ವಿತರ ಸನ್ನಿದಾನದಲ್ಲಿ ದೂರು ಅರ್ಜಿ ಸಲ್ಲಿಸಿದ್ದು, ಈ ಹಿಂದೆ ನೀಡಿದ ಅರ್ಜಿ ವಿಲೇ ಆಗಿದ್ದರಿಂದ, ದೂರುದಾರರು ದಿ:21/11/2014 ರಂದು ಮತ್ತೊಂದು ಅರ್ಜಿ ನೀಡಿದ್ದು, ಅದರ ಸಂಖ್ಯೆ: 16030813714277 ಇದ್ದು ಸಂಬಂಧಿಸಿದ ಜಮೀನಿನ ಖಾತೆದಾರರಾದ ಶ್ರೀ ಜಾರ್ಜ್ ಮಿನೇಜಸ್ ರವರು ಊರಲ್ಲಿ ಇಲ್ಲದೇ ಇದ್ದ ಕಾರಣ, ಸದರಿಯವರು ಪರ ಊರಿನಲ್ಲಿ ಇದ್ದ ಕಾರಣ, ಅವರ ವಿಳಾಸ ಉಡುಕುವಲ್ಲಿ ವಿಳಂಭವಾಗಿರುತ್ತದೆ. ದೂರುದಾರರ ಅರ್ಜಿ ಮೋಜಣಿ ತಂತ್ರಾಂಶದಲ್ಲಿ ತಮ್ಮ ಕಛೇರಿಯ ಭೂಮಾಪಕರಾದ ಶ್ರೀ ಮಲ್ಲೇಶ್ ರವರಿಗೆ ದೂರುದಾರರು ತಿಳಿಸಿರುವ ಜಮೀನಿನ ಅಳತೆ ಬಗ್ಗೆ ಕೆಲಸವನ್ನು ಹಂಚಲಾಗಿದ್ದು, ಶ್ರೀ ಮಲ್ಲೇಶ್ ಭೂಮಾಪಕರು ದಿನಾಂಕ:26/12/2014ಅನ್ನು ಅಳತೆ ದಿನಾಂಕವನ್ನಾಗಿ ನಿಗಧಿಪಡಿಸಿ ದೂರು/ಅರ್ಜಿದಾರರಿಗೆ ಮತ್ತು ಇತರೆ ಆರ್‌ಟಿಸಿದಾರರಿಗೆ ಮುಂಚಿತವಾಗಿ ತಿಳುವಳಿಕೆ ನೋಟೀಸ್ ನೀಡಿ ಸ್ಥಳದ ಅಳತೆ ಮಾಡಿ ವರದಿ ನೀಡಿರುತ್ತಾರೆ ಹಾಗೂ ದೂರುದಾರರಾದ ಶ್ರೀ ಹರೀಶ್ ಶೆಟ್ಟಿಯವರ ಹೇಳಿಕೆಯನ್ನು ದಾಖಲಿಸಿರುತ್ತಾರೆ.

3. ದೂರುದಾರರ ಹೇಳಿಕೆ ಹಾಗೂ ಭೂಮಾಪಕರ ವರದಿಯಂತೆ ಸರ್ವೇ ನಂ.461/2 ರ ಹಿಸ್ಸೆಯ ಪೂರ ಅನುಭವವು ಮತ್ತೊಬ್ಬ ಆರ್‌ಟಿಸಿದಾರರಾದ ಶ್ರೀಮತಿ ಸುಮತಿ C/o ಅನಂತಕೃಷ್ಣ ಬೆಳಿರಾಯ ರವರ ಅನುಭವದಲ್ಲಿದ್ದು, ಜಿಪಿಎ ಹೋಲ್ಡರ್ ಆದ ಅರ್ಜಿದಾರರು ಸ್ಥಳದಲ್ಲಿ ಅನುಭವವನ್ನು ಹೊಂದಿಲ್ಲದ ಕಾರಣ ಮತ್ತು ಸರ್ವೇ ನಂ. 461/2 ರ ಜಮೀನಿನ ವಿಸ್ತೀರ್ಣದಲ್ಲಿ ವ್ಯತ್ಯಾಸವಿದ್ದ ಕಾರಣ ನಕ್ಷೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿ ವರದಿ ಮಾಡಲಾಗಿತ್ತು. ಅರ್ಜಿದಾರರು ಸಹ ತಮ್ಮ ಹೇಳಿಕೆಯಲ್ಲಿ ಸದರಿ ಅಂಶವನ್ನು ಒಪ್ಪಿ ಹೇಳಿಕೆಗೆ ಸಹಿ ಮಾಡಿರುತ್ತಾರೆ. ಇದರಂತೆ, ಭೂಮಾಪಕರು ಕಡತವನ್ನು ಕಛೇರಿಗೆ ಒಪ್ಪಿಸಿರುತ್ತಾರೆ. ದೂರುದಾರರ ಕೋರಿಕೆಯಂತೆ ದಿ:21/12/2015 ರಂದು ತಹಶೀಲ್ದಾರ್ ರವರು ಸದರಿ ಸರ್ವೇ ನಂ.461ರ ಎಲ್ಲ ಹಿಸ್ಸೆಗಳನ್ನು ಅಳತೆ ಮಾಡಿ ವರದಿ ನೀಡುವಂತೆ ಆದೇಶ ನೀಡಿದ ಮೇರೆಗೆ ತಮ್ಮ ಕಛೇರಿಯ ಪರ್ಯಾವೇಕ್ಷಕರಾದ ಶ್ರೀ ಎನ್.ವಿ. ಗೋಪಾಲ್‌ರವರು ಕಡತವನ್ನು ಹಿರಿಯ ಭೂಮಾಪಕರಾದ ಶ್ರೀ ರಾಘವೇಂದ್ರ ವೈದ್ಯರವರಿಗೆ ನೀಡಿರುತ್ತಾರೆ. ಸದರಿಯವರು ಸರ್ವೇ ನಂ.461ರ ಎಲ್ಲಾ ಹಿಸ್ಸೇದಾರರಿಗೆ ಮತ್ತು ಅರ್ಜಿದಾರರಿಗೆ/ದೂರುದಾರರಿಗೆ ಮುಂಚಿತವಾಗಿ ತಿಳುವಳಿಕೆ ನೋಟೀಸ್ ನೀಡಿ ದಿ:05/10/2015 ರಂದು ಸ್ಥಳಕ್ಕೆ ಹೋಗಿ ಅಳತೆ ಕೆಲಸವನ್ನು ಪೂರೈಸಿ ನಕ್ಷೆಯೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ. ಅವರ ವರದಿಯಂತೆ ಸರ್ವೇ ನಂ.461/2 ರಲ್ಲಿ ಟಿಪಿಸಿ 27/11-12 ರಂತೆ ಈ ಹಿಂದೆ ಮೂರು ಮತ್ತು ನಾಲ್ಕನೇ ಹಿಸ್ಸೆಯನ್ನು ವಿಂಗಡಿಸಿದಾಗ 461/2 ರ ಒಟ್ಟು 1.8 ಎಕರೆ

ವಿಸ್ತೀರ್ಣವನ್ನು ಹಂಚಿಕೆ ಮಾಡುವ ಬದಲು 1.77 ಎಕರೆ ವಿಸ್ತೀರ್ಣ ಜಮೀನು ಹಂಚಿಕೆಯಾಗಿರುತ್ತದೆ. ಆದರೆ, ದಾಖಲೆಯಲ್ಲಿ 1.88 ಎಕರೆ ಎಂದು ನಮೂದಾಗಿರುತ್ತದೆ ಮತ್ತು ಹೊಸದಾಗಿ ವಿಂಗಡಿಸಿದ ಹಿಸ್ಸೆ 461/3 ಕ್ಕೆ 1.47 ಎಕರೆ ಎಂದು ದಾಖಲಿಸಿದ್ದು ವಾಸ್ತವವಾಗಿ ಸದರಿ ಸ್ಥಳದಲ್ಲಿ 1.58 ಎಕರೆ ವಿಸ್ತೀರ್ಣ ಬರುತ್ತದೆ ಅಂದರೆ 0.11 ಎಕರೆ ವಿಸ್ತೀರ್ಣವು ಸರ್ವೇ ನಂ.461/2 ರಲ್ಲಿ ಕಡಿಮೆಯಾಗಿದ್ದು, ಸರ್ವೆ ನಂ.461/3 ರಲ್ಲಿ 0.11 ಎಕರೆ ಜಮೀನಿನ ವಿಸ್ತೀರ್ಣ ಹೆಚ್ಚಾಗಿರುತ್ತದೆ. ಈ ರೀತಿ ಹಿಸ್ಸೆಗಳಲ್ಲಿ ವ್ಯಾತ್ಯಾಸವಿರುವುದನ್ನು ಸರಿಪಡಿಸಲು ಹೊಸದಾಗಿ ರಚನೆಯಾದ ಹಿಸ್ಸೆಗಳನ್ನು ರದ್ದುಪಡಿಸಬೇಕಾಗಿದ್ದು, ರದ್ದುಪಡಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು, ಉಡುಪಿ ಜಿಲ್ಲೆ, ಉಡುಪಿ ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಹಿಸ್ಸೆಗಳನ್ನು ರದ್ದುಪಡಿಸಿದ ನಂತರ ಅರ್ಜಿದಾರರು/ದೂರುದಾರರು ಜಿಪಿಎ ಅಡಿಯಲ್ಲಿ ತೋರಿಸಿರುವ ಸ್ಥಳವನ್ನು ಆರ್‌ಟಿಸಿಯೊಳಗೆ ನಮೂದಿಸಿರುವ ವಿಸ್ತೀರ್ಣಕ್ಕೆ ತಾಳೆ ಇಟ್ಟು ಅಳತೆ ಮಾಡಿ ನಕ್ಷೆ ನೀಡಲಾಗುವುದೆಂದು ತಿಳಿಸಿರುತ್ತಾರೆ. 2ನೇ ಎದುರುದಾರರು ಸಹ 1ನೇ ಎದುರುದಾರರನ್ನು ಅನುಸರಿಸಿ ಉತ್ತರವನ್ನು ನೀಡಿರುತ್ತಾರೆ.

4. ಎದುರುದಾರರುಗಳು ಸಲ್ಲಿಸಿರುವ ಪಾಲನಾ ವರದಿ/ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರುಗಳು ಸರ್ವೇ ಕಾರ್ಯವನ್ನು ಹಿಂದೆ ಸರಿಯಾಗಿ ನಿರ್ವಹಿಸದೇ ಇದ್ದ ಕಾರಣ, ಈ ರೀತಿಯ ತೊಂದರೆಗಳಿಗೆ ಕಾರಣವಾಗಿರುತ್ತದೆ. ಇದಲ್ಲದೇ, ಎದುರುದಾರರು ತಿಳಿಸಿರುವಂತೆ ಹೊಸದಾಗಿ ರಚನೆಯಾದ ಹಿಸ್ಸೆಗಳನ್ನು ರದ್ದುಪಡಿಸಿ ಉಂಟಾಗಿರುವ ವ್ಯತ್ಯಾಸವನ್ನು ಸರಿಪಡಿಸಲು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರು, ಉಡುಪಿ ಜಿಲ್ಲೆ ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ನಂತರ ದೂರುದಾರರ ಜಮೀನಿನ ಆರ್‌ಟಿಸಿ ವಿಸ್ತೀರ್ಣಕ್ಕೆ ತಾಳೆ ಇಟ್ಟು ಅಳತೆ ಮಾಡಿ ನಕ್ಷೆಯನ್ನು ನೀಡಲಾಗುವುದೆಂದು ಎದುರುದಾರರು ತಿಳಿಸಿರುವ ಅಂಶವು ಇದುವರೆಗೂ ಯಾವುದೇ ರೀತಿ ಫಲಿತಾಂಶವನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. ದೂರಿನಂಶಗಳನ್ನು ಎದುರುದಾರರು ಸಲ್ಲಿಸಿರುವ ಪಾಲನಾ ವರದಿ/ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು ದಿ:20/05/2009 ರಂದು 11ಇ ನಕ್ಷೆ ಕೋರಿ ಅರ್ಜಿ ಸಲ್ಲಿಸಿದ್ದು, ದೂರುದಾರರಿಗೆ ಮತ್ತು ಸಂಬಂಧಪಟ್ಟವರಿಗೆ ನೋಟೀಸ್ ನೀಡಿ ಭೂಮಾಪಕರು ಸ್ಥಳಕ್ಕೆ ಹೋದಾಗ ದೂರುದಾರರು/ಅರ್ಜಿದಾರರು ಸ್ಥಳದಲ್ಲಿ ಹಾಜರಾಗದೇ ಇದ್ದ ಕಾರಣ, ಸ್ಥಳ ಮಹಜರ್ ಕ್ರಮ ಜರುಗಿಸಿ ದೂರುದಾರರ ಅರ್ಜಿಯನ್ನು ವಿಲೇಮಾಡಲಾಯಿತ್ತೆಂದು ನಂತರ ದೂರುದಾರರು ಮತ್ತೊಂದು ಅರ್ಜಿಯನ್ನು ದಿ:21/11/2014 ರಂದು ನೀಡಿದ ಮೇರೆಗೆ ಸ್ಥಳದಲ್ಲಿ

Sd/-

ಭೂಮಾಪಕರಾದ ಶ್ರೀ ರಾಘವೇಂದ್ರ ವೈದ್ಯರವರು ಅಳತೆ ಮಾಡಿ 461/2 ರ ಜಮೀನು ಹಾಗೂ 461/3 ಮತ್ತು 461/4 ರ ಜಮೀನುಗಳಲ್ಲಿ ಅನುಭವದಲ್ಲಿರುವ ಜಮೀನಿಗೂ ಮತ್ತು ಆರ್‌ಟಿಸಿಯಲ್ಲಿರುವ ವಿಸ್ತೀರ್ಣಕ್ಕೂ ವ್ಯತ್ಯಾಸವಿರುತ್ತದೆ ಎಂದು ತಿಳಿಸಿ ವರದಿ ನೀಡಿದ್ದರೆಂದು ತಿಳಿಸಿರುತ್ತಾರೆ. ಆದರೆ, ಸದರಿ ದಿನಾಂಕದಿಂದ ಅಂದರೆ ದಿ.25/07/2015 ರ ನಂತರ 8 ತಿಂಗಳುಗಳು ಕಳೆದರೂ ಸಹ ಮೇಲೆ ತಿಳಿಸಿದಂತೆ ಸದರಿ ಜಮೀನುಗಳ ಹಿಸ್ಸೆಗಳನ್ನು ರದ್ದುಪಡಿಸಿ ಹೊಸದಾಗಿ ಅಳತೆ ಮಾಡಿ ಆರ್‌ಟಿಸಿಯಲ್ಲಿನ ಅಳತೆಯೊಡನೆ ತಾಳೆ ಮಾಡಿ ಜಮೀನುಗಳ ನಕ್ಷೆಯನ್ನು ನೀಡಲಾಗುವುದೆಂದು ಎದುರುದಾರರು ತಿಳಿಸಿದ್ದರೂ ಸಹ ಇದುವರೆಗೂ ಅಂತಹ ನಕ್ಷೆಯನ್ನು ನೀಡದೇ ಇರುವುದು ಅವರು ಅನುಸರಿಸುತ್ತಿರುವ ವಿಳಂಭ ನೀತಿಯನ್ನು ಸ್ಪಷ್ಟ ಪಡಿಸುತ್ತದೆ. ಇದಲ್ಲದೇ, ಎದುರುದಾರರು ತಾವು ಸದರಿ ಹಿಸ್ಸಾಗಳನ್ನು ರದ್ದುಪಡಿಸಿ ಹೊಸದಾಗಿ ಅಳತೆಮಾಡಿ ಬಾಂಡ್‌ಗಳನ್ನು ಗುರುತಿಸುವ ಬಗ್ಗೆ ಉಪನಿರ್ದೇಶಕರು, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನ ಮರ್ಣೆ ಗ್ರಾಮದ ಸರ್ವೇ ನಂ.461 ರ ಜಮೀನಿನಲ್ಲಿ ಹೊಸದಾಗಿ ರಚಿಸಲಾದ ಹಿಸ್ಸಾ ನಂಬರ್‌ಗಳನ್ನು ರದ್ದುಪಡಿಸಿ ಎದುರುದಾರರು ತಿಳಿಸಿರುವಂತೆ ಸರ್ವೇ ಕಾರ್ಯವನ್ನು ಕೈಗೊಂಡು ಉಂಟಾಗಿರುವ ಅಳತೆಗಳಲ್ಲಿನ ವ್ಯತ್ಯಾಸವನ್ನು ಸರಿಪಡಿಸಿ, ದೂರುದಾರರು ಕೋರಿರುವ 11ಇ ನಕ್ಷೆಯನ್ನು ನೀಡಲು ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 19.1.17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** Sd/- 19/1/17